International Journal of Kannada Research
www.kannadajournal.com

**ISSN: 2454–5813**
IJSR 2017; 3(2): 81-83
© 2017 IJKS
www.kannadajournal.com
Received: 16-02-2017
Accepted: 17-03-2017

**ಪ್ರಮೀಳ.ಜಿ**
ಸಂಶೋಧನಾ ವಿಧ್ಯಾರ್ಥಿನಿ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಡಾ.ಪಿ.ಎಂ.ಗಂಗಾಧರಯ್ಯ**
ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**Correspondence**
**ಪ್ರಮೀಳ.ಜಿ**
ಸಂಶೋಧನಾ ವಿಧ್ಯಾರ್ಥಿನಿ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

# ಕೃಷಿ ಮತ್ತು ಆಧುನಿಕ ಮಹಿಳೆ

**ಪ್ರಮೀಳ.ಜಿ, ಡಾ.ಪಿ.ಎಂ.ಗಂಗಾಧರಯ್ಯ**

## ಪೀಠಿಕೆ

ಮಾನವ ತನ್ನ ಬದುಕನ್ನು ನಿರ್ವಹಿಸುಲು ಆಹಾರ ಅತ್ಯಂತ ಅಗತ್ಯವಾಗಿ ಬೇಕಾಗಿದೆ. ಆಹಾರದ ಹುಡುಕಾಟ ಒಂದೆಡೆಯಿದ್ದರೆ, ಭೂಮಿಯಲ್ಲಿ ಬೆಳೆಯುವ ಪ್ರಯತ್ನ ಇನ್ನೊಂದೆಡೆ ಕಂಡುಬರುತ್ತದೆ. ಒಂದು ಕಾಲದಲ್ಲಿ ಮಾನವ ತನ್ನ ಆಹಾರದ ಹುಡುಕಾಟದಲ್ಲಿ ಒಂದೆಡೆ ನಿಲ್ಲದೆ ಅಲೆದಾಡುತ್ತಿದ್ದನು. ಭೂಮಿಯಲ್ಲಿ ಆಹಾರ ಬೆಳೆಯುವ ಪ್ರಯತ್ನ ಯಶಸ್ವಿಯಾದಂತೆ ಅಲೆಮಾರಿ ಬದುಕನ್ನು ಬಿಟ್ಟು ಒಂದು ಕಡೆ ನೆಲೆನಿಲ್ಲಲು ಪ್ರಾರಂಭಿಸಿ ಆಹಾರದ ಹುಡುಕಾಟವೇ ಬದುಕಿನ ಮೂಲ ಅವಶ್ಯಕತೆಯಾಗಿರುವುದರಿಂದ ಕೃಷಿ ಕೈಗೂಡುತ್ತಿದ್ದಂತೆ ಇರಲು ಜಾಗ, ಬಿಸುಲು ಮಳೆಯಿಂದ ರಕ್ಷಿಸಿಕೊಳ್ಳಲು ಅಗತ್ಯವಾದ ಸ್ಥಳದ ಕಡೆಗೆ ಗಮನ ಬಂದಿತು.
ಮೇಲಿನ ಎರಡೂ ಅವಶ್ಯಕತೆಗಳು ಮುಗಿದು ನಂತರ ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲು ತೊಡಗಿಸಿಕೊಂಡನು. ಬೆಳೆಗಳ ವೈವಿಧ್ಯತೆ ಹೆಚ್ಚಿದಂತೆ ಹೆಚ್ಚು ಭೂಮಿಯನ್ನು ಕೃಷಿಯಲ್ಲಿ ತೊಡಗಿಸಲು ಮುಂದಾದರು, ಹೀಗೆ ಬೆಳೆಯುವಾಗ ಹೊಲ, ಗದ್ದೆ, ಒಣಭೂಮಿ, ಮಳೆ ಆಧಾರಿತ ಭೂಮಿ ಹೀಗೆ ವಿಂಗಡಿಸಿಕೊಂಡು ಅದರ ಆಧಾರದ ಮೇಲೆ ವಿವಿಧ ಬಗೆಯ ಬೆಳೆಗಳನ್ನು ಬೆಳೆಯಲು ತೊಡಗಿದರು. ರಾಗಿ, ಭತ್ತ, ಬೆಳೆಕಾಳುಗಳು ಮತ್ತು ಇತರೆ ಬೇಳೆಕಾಳುಗಳು ವರ್ಷಕ್ಕೆ ಒಮ್ಮೆ ಅಥಾವ ಎರಡು ಬಾರಿ ಬೆಳೆದರೆ, ತೋಟಗಳು ಹಲವಾರು ವರ್ಷ ನಿರಂತರವಾಗಿ ಫಸಲು ಕೊಡುವಂತಾಯಿತು. ಈ ಸಂಸ್ಕೃತಿಯು ಹೆಚ್ಚಾದಂತೆ ಒಂದೆಡೆ ಸ್ಥಿರವಾಗಿ ನಿಂತು ಕೃಷಿಯನ್ನೇ ಮೂಲ ಉದ್ಯೋಗವಾಗಿಸಿಕೊಂಡರು.

## ಕೃಷಿಯಲ್ಲಿ ಮಹಿಳೆಯ ಸ್ಥಾನಮಾನ

ಕೃಷಿ ಪ್ರಾರಂಭವಾದಾಗ ಮಹಿಳೆಯೇ ಹೆಚ್ಚಿನ ಸ್ಥಾನಮಾನವನ್ನು ಪಡೆದಿದ್ದಳು. ಪ್ರತಿಯೊಂದು ವಿಷಯದಲ್ಲೂ ಹೆಣ್ಣಿಗೆ ಪ್ರಾಮುಖ್ಯತೆ ಇತ್ತು. ಆರಂಭದಲ್ಲಿ ಹೆಣ್ಣೇ ಮೊದಲು ಬೀಜವನ್ನು ಬಿತ್ತನೆ ಮಾಡಿದ್ದು ಕೃಷಿಯನ್ನೇ ಪ್ರಾರಂಬಿಸಿದಳೆನ್ನಬಹುದು. ಮನೆಯ ಕೆಲಸವನ್ನು ನಿರ್ವಹಿಸಿಕೊಂಡು ಮಕ್ಕಳ ಪೋಷಣೆಯನ್ನು ಮಾಡಿ ಉಳಿದ ಸಮಯದಲ್ಲಿ ಗಂಡಿನ ಜೊತೆಯಲ್ಲಿ ತಾನೂ ಕೃಷಿಯ ಕೆಲಸದಲ್ಲಿ ದುಡಿಯುವುದರಲ್ಲಿ ತಲ್ಲೀನಗೊಂಡಳು. ಮಹಿಳೆಯ ಕೆಲಸ ಹೆಚ್ಚಾಗಿ ನಾಲ್ಕು ಗೋಡೆಗಳಿಗೆ ಸೀಮಿತವಾಗದೆ, ಎಲ್ಲರೊಂದಿಗೂ ಬೆರೆತು ಕೂಡಿ ಗಂಡಸಿಗೆ ಸರಿಸಮಾನವಾಗಿ ಭಾಗವಹಿಸಿದಳು ಈ ಒಂದು ಕಾರ್ಯವು ನಿರಂತರವಾಗಿ ನೆಡೆಯುತ್ತಾ ಹೋದಂತೆ ಕೃಷಿಯಲ್ಲಿ ತೊಡಗುವಲ್ಲಿ ಯಶಸ್ವಿಯಾದಳು.

## ಕೃಷಿಯಲ್ಲಿ ಮಹಿಳೆಯ ಪ್ರವೇಶದ ಅನಿವಾರ್ಯತೆ

ಅಂದು ಹೆಣ್ಣಿನಿಂದ ಪ್ರಾರಂಭವಾದ ಕೃಷಿಯ ಸಂದರ್ಭಗಳು ವಿರಳ ಮತ್ತು ಕೆಲವೊಂದು ಅನಿವಾರ್ಯ ಸ್ಥಿತಿಯಲ್ಲಿ ಮಾತ್ರವೇ ಮಹಿಳೆಯರು ಕೃಷಿಯನ್ನು ತಾವೇ ನೆಡೆಸಿಕೊಂಡು ಹೋಗುವುದನ್ನ ಕಾಣತ್ತೇವೆ.

1. ಮನೆಯಲ್ಲಿ ಗಂಡುಮಕ್ಕಳಿಲ್ಲದಿದ್ದಾಗ ಅಣ್ಣ–ತಮ್ಮಂದಿರು ಯಾರೂ ಇಲ್ಲದಿದ್ದಾಗ ವೃದ್ಧ ತಂದೆ–ತಾಯಿಗಳನ್ನು ನೋಡಿಕೊಳ್ಳುವಂತಹ ಜವಾಬ್ದಾರಿ ಹೆಣ್ಣುಮಕ್ಕಳ ಮೇಲೆಯೇ ಬಿದ್ದಾಗ ಅವರು ಕೃಷಿ ಅವಲಂಬಿತ ಕುಟುಂಬದವರಾಗಿದ್ದರೆ ಮಹಿಳೆಯು ಕೃಷಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

2. ಗಂಡು ಮಕ್ಕಳಿದ್ದರೂ ಅಪ್ರಾಪ್ತ ವಯಸ್ಕರಾಗಿದ್ದರೆ ಮನೆಯಲ್ಲಿ ಮಹಿಳೆಯರು ಕೃಷಿ ಮಾಡಿಕೊಂಡು ಹೋಗುತ್ತಾರೆ.
3. ಗಂಡು ಮಕ್ಕಳಿದ್ದರೂ ವಯಸ್ಸಾದ ತಂದೆ–ತಾಯಿಗಳನ್ನು ನೋಡದೆ ತನ್ನ ಹೆಂಡತಿ ಮಕ್ಕಳೊಂದಿಗೆ ಬೇರೆ ಕಡೆ ವಾಸವಾಗಿದ್ದರೆ ಅಂತಹ ಸಂದರ್ಭದಲ್ಲಿ ಅವರದು ಕೃಷಿ ಅವಲಂಬಿತ ಕುಟುಂಬದವರಾಗಿದ್ದರೆ ಮನೆಯ ಹೆಣ್ಣುಮಕ್ಕಳೇ ಕೃಷಿಯನ್ನು ನೋಡಿಕೊಂಡು ಹೋಗುತ್ತಾರೆ.
4. ಕೃಷಿ ಕುಟುಂಬದೊಳಗಿನ ಗಂಡು ಮಕ್ಕಳಿಗೆ ಅನಾರೋಗ್ಯ ಅಂಗ ವಿಕಲತೆ ಅಥವಾ ನ್ಯೂನ್ಯತೆಯಿಂದ ಕೂಡಿದ್ದರೆ ಅಥವಾ ಅಸ್ವಸ್ಥವಾಗಿ ಇದ್ದರೆ ಅಂತಹ ಸಂದರ್ಭದಲ್ಲಿ ಕೃಷಿಯನ್ನು ಮಹಿಳೆಯರು ನಿಭಾಯಿಸುತ್ತಾರೆ.
5. ಕೃಷಿ ಕುಟುಂಬದ ಗಂಡು ಮಕ್ಕಳು ಓದುತ್ತಿದ್ದರೆ ಯಾವುದಾದರೂ ಬೇರೆ ಉದ್ಯೋಗದಲ್ಲಿ ತೊಡಗಿದ್ದರೆ ಆ ಕುಟುಂಬದಲ್ಲಿ ವಾಸವಾಗಿದ್ದ ಮಹಿಳೆಯರು ಅನಿವಾರ್ಯಗಿದೆಯಾದರೂ ಕೃಷಿ ಕೆಲಸಗಳನ್ನು ಮಾಡುತ್ತಿರುತ್ತಾರೆ.
6. ಗಂಡ ಇಲ್ಲದೆ ವಯಸ್ಸಿಗೆ ಬಂದ ಮಕ್ಕಳು ಹೊಲದಲ್ಲಿ ಕೆಲಸ ಮಾಡದೆ ಊರಲ್ಲಿ ಅಪಪೋಲಿಗಳಂತೆ ಊರಿನ ರಾಜಕೀಯ ಮಾಡಿಕೊಂಡು ತಿರುಗುತ್ತಿದ್ದರೆ ಅಂತಹ ಕುಟುಂಬದೊಳಗಿನ ಮಹಿಳೆ ಅನಿವಾರ್ಯವಾಗಿ ಹೊಲ ಮನೆಗಳೆರಡನ್ನು ನಿಭಾಯಿಸಿಕೊಂಡು ಹೋಗುವುದು ಕಂಡುಬರುತ್ತದೆ.

**ಪ್ರಸ್ತುತವಾಗಿ ಕೃಷಿಯ ಸ್ಥಾನಮಾನ:**

ಕೃಷಿಯು ಭೂತಕಾಲದಲ್ಲಿ ಹೇಗಿತ್ತು? ವರ್ತಮಾನ ಕಾಲದಲ್ಲಿ ಹೇಗಿದೆ ಎಂಬುದನ್ನು ಕುರಿತು ಚಿಂತಿಸಬೇಕಾಗಿರುವುದು ಅಗತ್ಯವಾಗಿದೆ.ಅಂದರೆ ಮಹಿಳೆಯರು ಏನೊಂದು ಕೃಷಿವಲಯದಲ್ಲಿ ಪ್ರಮುಖ ಸ್ಥಾನಮಾನ ಪಡೆದಿದ್ದರೂ ಈಗ ಅದರಿಂದ ಹಿಂದೆ ಸರಿಯುತ್ತಾ ಬಂದಿದ್ದಾರೆ.ಅದಕ್ಕೆ ಕಾರಣ ಹೆಣ್ಣು ಈಗ ಮನೆಕೆಲಸಕಷ್ಟೇ ಸೀಮಿತವಾಗದೇ, ಗಂಡಿನ ಸರಿಸಮಾನವಾಗಿ ದುಡಿಯಲು ದಿಟ್ಟ ಹೆಜ್ಜೆ ಇಟ್ಟಿದ್ದಾಳೆ. ಮೀನಿನಂತೆ ಈಜಬಲ್ಲಳು, ಹಕ್ಕಿಯಂತೆ ಹಾರಬಲ್ಲಳು ತಾನು ಯಾರಿಗಿಂತ ಕಡಿಮೆಯಿಲ್ಲ ಎಂದು ತೋರಿಸುವಲ್ಲಿ ಕುಶಲತೆ ತಂತ್ರಜ್ಞಾನ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಲು ಇಂದು ಮುಂದಾಗಿದ್ದಾಳೆ. ಈ ಒಂದು ಪ್ರಕ್ರಿಯೆಯು ನಗರಕ್ಕೆ ಸೀಮಿತವಾಗದೇ ಹಳ್ಳಿ ಹಳ್ಳಿಗೂ ಇದರದಟ್ಟಪ್ರಾಭಾವವನ್ನು ಬೀರಿದೆ.ಅಂದರೆ ಸಾಮಾನ್ಯವಾದ ಕೆಲಸದಿಂದ ಹಿಡಿದು

ರಾಷ್ಟ್ರವಾಳುವ ರಾಷ್ಟ್ರಪತಿಯವರೆಗೂ ಪೈಪೋಟಿಗೆ ಇಳಿದಿದ್ದಾಳೆ. ಕೃಷಿಯನ್ನು ನಂಬಿ ಬದುಕುವವರ ಸಂಖ್ಯೆ ಇಂದು ಕಡಿಮೆಯಾಗಿದೆ, ಬೆಳಿಗ್ಗೆಯಿಂದ ಸಂಜೆಯುವರೆಗೂ ದುಡಿದರೆ ಸಿಗುವ ಕನಿಷ್ಠ ಕೂಲಿಯು ಜೀವನ ನೆಡೆಸಲು ಸಾಕಾಗುವುದರಿಂದ ಹಾಗೂ ಕಷ್ಟಸಾಧ್ಯವೆಂದು ಅರಿತು ತನ್ನ ಬಲವನ್ನು ಬೇರೆಯ ಕ್ಷೇತ್ರಕ್ಕೆ ತೋರಿಸುತ್ತಾ ಬಂದಿದ್ದಾರೆ.

ಈ ಆಧುನಿಕ ದಿನಗಳಲ್ಲಿ ಕೃಷಿಯು ಒಪ್ಪಂದದ ವ್ಯಾಪಾರವಾಗಿ ಬದಲಾಗುತ್ತಿದೆ. ಯಂತ್ರಗಳು ಮಹಿಳೆಯರ ದುಡಿಮೆಯ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಇವುಗಳು ಕೃಷಿಯಲ್ಲಿನ ಪಾಲುದಾರಿಕೆಯನ್ನು ಕಡಿತಗೊಳಿಸುತ್ತಿವೆ. ಹತ್ತಾರು ಜನ ದಿನವಿಡೀ ಮಾಡುತ್ತಿದ್ದ ಕೆಲಸ ಕಾರ್ಯಗಳನ್ನು ಯಂತ್ರ ಕೆಲವೇ ಗಂಟೆಗಳಲ್ಲಿ ಮಾಡಿ ಮುಗಿಸುತ್ತಿದೆ. ಇದು ಅಭಿವೃದ್ಧಿಯ ಸಂಗತಿಯೇ ಆದರೂ ಕೃಷಿಯನ್ನು ಅವಲಂಬಿಸಿ ಬದುಕು ಸಾಗಿಸುತ್ತಿದ್ದ ಮಧ್ಯಮ ಮತ್ತು ಬಡವರ್ಗದ ಕುಟುಂಬದ ಕೃಷಿ ಮಹಿಳೆಯರ ಉದ್ಯೋಗದ ಅವಕಾಶಗಳನ್ನು ಕಡಿತಗೊಳಿಸಿದೆ ಮಹಿಳೆ ಬಿತ್ತುವ ಕಳೆ ತೆಗೆಯುವ ಕೊಯ್ಯುವ ಧಾನ್ಯಗಳನ್ನು. ಹಸುನುಗೊಳಿಸುವ ಇತ್ಯಾದಿ ಕೃಷಿ ಕೆಲಸಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ಆದರೆ ಗೆರೆ ಹೊಡೆದು ಏಕಕಾಲದಲ್ಲಿ ಬಿತ್ತುವ ಯಂತ್ರಗಳ ಬಳಕೆಯಿಂದ ಹೆಣ್ಣು ದೂರ ಉಳಿಯುತ್ತಿದ್ದಾಳೆ. ತಂತ್ರಜ್ಞಾನ ಬೆಳೆದಂತೆ ಹೆಚ್ಚು ಹೆಚ್ಚು ತಿಳುವಳಿಕೆಯನ್ನು ಹೊಂದುತ್ತಿರುವುದರಿಂದ ಅವರ ಆಲೋಚನೆಗಳು ಬದಲಾಗುತ್ತಿವೆ. ಕೃಷಿಯಲ್ಲಿ ಹೆಚ್ಚಾಗಿ ಮಹಿಳಾ ಕೂಲಿಗಳು ಇದು ಅವರ ಕೆಲಸದ ಮೇಲೆ ಇದು ಋಣಾತ್ಮಕ ಪರಿಣಾಮ ಬೀರಿವೆ.

ಕುಟುಂಬದ ಪ್ರತಿಷ್ಠೆಯ ಸಂಕೇತವೆಂದು ಹೆಚ್ಚು ಬೀಗುವ ಮೇಲ್ವರ್ಗದ ಜನರು ಕೃಷಿಯನ್ನು ಅತ್ಯಂತ ಕೀಳು ಮನೋಭಾವದಿಂದ ನೋಡುತ್ತಿದ್ದಾರೆ.ಅಲ್ಲದೆ ಈಗ ಹಿಂದಿನವರಂತೆ ಬೆವರು ಸುರಿಸಿ ಕಷ್ಟಪಟ್ಟು ಕೆಲಸ ಮಾಡಿ ತಿನ್ನಲು ಇಷ್ಟಪಡುವುದಿಲ್ಲ. ಹಣ ಸಂಪಾದನೆಗೆ ಬೇರೆ ಬೇರೆ ರೀತಿಯ ಮಾರ್ಗಗಳನ್ನು ಅನುಸರಿಸಲು ಮುಂದಾಗುತ್ತಿದ್ದಾರೆ. ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯು ಇಂದು ಕಣ್ಮರೆಯಾಗುತ್ತಿದೆ. ಮಹಿಳೆಯರು ಸಹ ಕೃಷಿ ಕೆಲಸ ಮಾಡುವವರನ್ನು ವಿವಾಹವಾಗಲು ಒಪ್ಪುವುದಿಲ್ಲ. ನಿರ್ಲಕ್ಷ್ಯ ತೋರುತ್ತಿದ್ದಾರೆ. ತಂದೆ–ತಾಯಿಗಳು ಅಷ್ಟೇ ಕೃಷಿಕರನ್ನು ವಿವಾಹ ಮಾಡಿ ಕೊಡಲು ಇಚ್ಛೆಪಡುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಕೃಷಿಯು ತನ್ನ ಮಹತ್ವವನ್ನು ಕಳೆದುಕೊಳುತ್ತಾ ಬಂದಿದೆ ಎಂದು ಹೇಳಬಹುದು. ಇಂದು ಸ್ತ್ರೀಯರಿಗಿಂತ ಪುರುಷರು ಸಹ ಕೃಷಿಯಿಂದ ದೂರ ಸರಿಯುತ್ತಿದ್ದಾರೆ. ಏಕೆಂದರೆ ಕೃಷಿಯೆಂಬುದು ಪ್ರಕೃತಿಯು ಮಹಿಳೆಯೊಂದಿಗೆ ಆಡುವ ಜೂಜಾಟವೆಂದೇ ಪರಿಗಣಿಸಿದ್ದಾರೆ. ಮಳೆ ಬಂತೆಂದರೆ ಬಂದಿತ್ತು ಇಲ್ಲವಾದರೆ ಇಲ್ಲ. ಇತ್ತೀಚಿಗೆ ರೈತರು ತಾವು ಅಧಿಕ ಶ್ರಮ ಬಂಡವಾಳ ಹಾಕಿದ್ದರೂ ಸರಿಯಾದ ರೀತಿಯಲ್ಲಿ ಬರುವುದಿಲ್ಲ.ಅಲ್ಲದೆ ಕೆಲವೊಮ್ಮೆ ಅತಿವೃಷ್ಠಿ ಈ ರೀತಿಯಾಗಿ ಆಗುತ್ತದೆ. ಹಲವು ಬಾರಿ ಹಾಕಿದ ಬಂಡವಾಳಕ್ಕಿಂತ ನಷ್ಟವೇ ಹೆಚ್ಚಾಗಿದೆ.

ಸಾಲ ಮಾಡಿ ಕೃಷಿ ಮಾಡಿದ ರೈತರು ಇಂದು ಅನ್ನ ನೀಡಿವ ಕೈ ವಿಷದ ಬಾಟಲಿ ಹಿಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದು ದುರದೃಷ್ಟಕರವೆಂದೇ ಹೇಳಬಹುದು. ಇದರಿಂದ ರೈತರು ಕೃಷಿಯಿಂದ ಹಿಂದೆ ಉಳಿಯುತ್ತಿದ್ದಾರೆ. ಆಧುನೀಕತೆಯ ಪ್ರಭಾವದಿಂದ ಹೊಲದ ಜಾಗದಲ್ಲಿ ಗಾರ್ಮೆಂಟ್ಸ್‌ಗಳು ತಲೆ ಎತ್ತಿ ನಿಂತಿವೆ .ಬೆಳ್ಳಗೆಯಿಂದ ಸಂಜೆಯವರೆಗೆ ಕೃಷಿ ಕೆಲಸ ಮಾಡಿ ಒಣಗುವ ಬದಲು ನಾಲ್ಕು ಗೋಡೆ ಮದ್ಯೆ ಕೆಲಸ ಮಾಡಲು ಇಚ್ಚಿಸುತ್ತಾರೆ. ಈ ಕಾರ್ಯ ಎಲ್ಲಾ ಪ್ರದೇಶಕ್ಕೂ ಅನ್ವಯವಾಗುವುದಿಲ್ಲ ಅಲ್ಲದೆ ಕೃಷಿ ಕೆಲಸ ಮಾಡುವಾಗ ಪುರುಷರಷ್ಟೇ ಸಮಾನವಾಗಿ ಕೆಲಸ ಮಾಡಿದರೂ ಸಹ ಪುರುಷರಿಗೆ ಒಂದು ರೀತಿ ಕೂಲಿಯನ್ನು ನಿಗದಿ ಪಡಿಸಿರುವುದು

**ಉಪಸಂಹಾರ**

ಕೃಷಿಯು ಇಂದು ಸಮಾನ್ಯವರ್ಗದವರಿಗೆ ಮಾತ್ರವೇ ಸೀಮಿತವಾಗಿದೆ ಸರ್ಕಾರವು ಏನೇ ಸೌಕಾರ್ಯಗಳನ್ನು ಒದಗಿಸಿದ್ದರು ಸಹ ಜನ ಕೃಷಿಯನ್ನು ಮಾಡಲು ಬಯಸುವುದಿಲ್ಲ ಏಕೆಂದರೆ ಸೌಲಭ್ಯಗಳಲ್ಲಿ ಅಧಿಕಾರಿಗಳ ಪಾಲಗುತ್ತಿವೆಯೇ ಹೊರೆತು ರೈತರಿಗೆ ಅವು ತಲುಪುವುದು ತುಂಬಾ ಕಡಿಮೆ ಬಿತ್ತನೆಗೆ ಗೊಬ್ಬರಕ್ಕೆ ಉಳುಮೆಗೆ ಕಟಾವಿಗೆ ಎಂದು ಮಾಡಿದ ಸಾಲವು ರೈತರಿಗೆ ತೀರಿಸಲು ಸಾಧ್ಯವಾಗುವುದಿಲ್ಲ ಇವೆಲ್ಲವನ್ನು ದಾಟಿ ಪಸಲು ಬೆಳೆದು ಮಾರುಕಟ್ಟೆಗೆ ಹೋದರೆ ಅಲ್ಲಿ ಮಧ್ಯವರ್ತಿಗಳು ದಲ್ಲಾಳಿಗಳ ಕಾಟವೇ ಹೆಚ್ಚಾಗಿರುತ್ತದೆ. ಪ್ರಾಚೀನ ಗಾದೆಯಂತೆ ವ್ಯವಸಾಯ ನೀನು ಸಾಯ ನಿಮ್ಮಪ್ಪ ಸಾಯ ಮನೆಯವರೆಲ್ಲ ಸಾಯ ಎಂಬತೆ ಆಗಿಹೋಗಿದೆ. ಮೇಲಿನ ಕಾರಣಗಳಲ್ಲದೆ ಅನೇಕ ಅಂಶಗಳು ಕೃಷಿಯಿಂದ ಮಹಿಳೆಯರು ದೂರ ಉಳಿಯುವಂತೆ ಮಾಡಿವೆ.

**ಆಧಾರ ಗ್ರಂಥಗಳು**

1. 1.ಕನ್ನಡ ವಿಷಯ ವಿಶ್ವಕೋಶ(ಜಾನಪದ) – ಮೈಸೂರು ವಿಶ್ವವಿದ್ಯಾಲಯ ಮೈಸೂರು, ಪ್ರಕಾಶನ.
2. ಕೃಷಿ ಆಚರಣೆಗಳು – ಮಲ್ಲಿಕಾರ್ಜುನ ಹೊಸಪಾಳ್ಯ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಕೃಷಿ ಜಾನಪದ ಮತ್ತು ಮಹಿಳೆ – ಡಾ: ಸುಮಂಗಲಾ ಅತ್ತಿಗೇರಿ ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು.